# ಎರಡನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ, ಚಿಕ್ಕಬಳ್ಳಾಪುರ, ಕಾರ್ಯಸ್ಥಾನ ಚಿಂತಾಮಣಿ.

## ಎಸ್.ಸಿ. ನಂಃ 29/2023

| | | | |
|---|---|---|---|
| **ಸಾಕ್ಷಿದಾರರ ಹೆಸರುಃ** | ಆರೀಫ್ | ಫ್ರಾಸಾಃ | 06 |
| **ತಂದೆಯ ಹೆಸರುಃ** | ಇಮಾನ್ ಸಾಬ್ | ಚಾಸಾಃ | 05 |
| **ವಯಸ್ಸುಃ** | 26 | ಪ್ರಮಾಣ ವಚನ ಭೋದಿಸಿದ ದಿನಾಂಕ: | 23-09-2025 |
| **ಉದ್ಯೋಗಃ** | ಕೂಲಿ | | |
| **ವಾಸ ಸ್ಥಳಃ** | ಚಿಂತಾಮಣಿ | | |

**ಮುಖ್ಯ ವಿಚಾರಣೆಃ ಸರ್ಕಾರಿ ಅಭಿಯೋಜಕರಿಂದಃ(ಆರೋಪಿಯನ್ನು ವಿಸಿ ಮುಖಾಂತರ ಹಾಜರುಪಡಿಲಾಗಿದೆ)**

ನನಗೆ ಆರೋಪಿ ಗೊತ್ತು. ಚಾಸಾ-*1* ನನ್ನ ತಂಗಿ. ಆಕೆ ವಿಕ್ರಮ್ ಕಾಲೇಜಿನಲ್ಲಿ ಬಿಕಾಂ ಓದುತ್ತಿದ್ದಳು. *2* ವರ್ಷದ ಹಿಂದೆ ಒಂದು ದಿನ ನನ್ನ ತಂಗಿ ಕಾಲೇಜಿನಿಂದ ಹಿಂದಿರುಗಲಿಲ್ಲ. *7-00* ಗೆ ಠಾಣೆಗೆ ಮಿಸ್ಸಿಂಗ್ ದೂರು ನೀಡಿದ್ದೆವು. *8-00* ಗೆ ಆಕೆ ನನಗೆ ಫೋನ್ ಮಾಡಿ ಆರೋಪಿ ತನ್ನನು ಕರೆದುಕೊಂಡು ಹೋಗಿದ್ದಾನೆ ಮನೆಗೆ ಬರುವುದಿಲ್ಲ ಎಂದು ತಿಳಿಸಿದ್ದಳು. ಠಾಣೆಗೆ ಮಾಹಿತಿ ನೀಡಿದ್ದೆವು. *20* ದಿನದ ನಂತರ ನನ್ನ ತಂಗಿ ಚಾಸಾ-*4*ರವರಿಗೆ ಫೋನ್ ಮಾಡಿ ಆರೋಪಿ ತನ್ನಲಿದ್ದ ಒಡವೆ , ಹಣ ಖರ್ಚು ಮಾಡಿಸಿ ಹಿಂಸೆ ಕೊಡುತ್ತಿದ್ದಾನೆ ಎಂದು ಮಾಹಿತಿ ನೀಡಿದ್ದಳು. ಪುನಃ *4-5* ದಿನದ ನಂತರ ಫೋನ್ ಮಾಡಿ ಧರ್ಮಸ್ಥಳದಲ್ಲಿ ಇರುವುದಾಗಿ ಹೇಳಿ ಬಸ್ ಚಾರ್ಚ್ ಗೆ ಹಣ ಕಳಿಸುವಂತೆ ಕೇಳಿದ್ದಳು. ಆಕೆ

ಹೇಳಿದ್ದ ನಂ. ಗೆ ಹಣ ಕಳುಹಿಸಿದ್ದೆವು. ಆಕೆ ನೀಡಿದ್ದ ಮಾಹಿತಿ ಮೇರೆಗೆ ನಾವು ಎ 2 ಬಿ ಬಳಿ ಹೋದಾಗ ನನ್ನ ತಂಗಿ ಹೊನ್ನಸಂದ್ರದ ಬಳಿ ಇದ್ದಳು. ವಿಚಾರಿಸಿದಾಗ ಆರೋಪಿ ಆಕೆಯನ್ನು ಹಿಂಬಾಲಿಸುತ್ತಿದ್ದು ಆಕೆಯನ್ನು ವಿಡಿಯೋ ತೋರಿಸಿರುವುದಾಗಿ ಬೆದರಿಸಿ ತನ್ನೊಂದಿಗೆ ಕರೆದುಕೊಂಡು ಹೋಗಿ, ಚೇಳೂರು ಲಾಡ್ಜ್ ನಲ್ಲಿ 3 ದಿನ ಬಲವಂತವಾಗಿ ಮದುವೆ ಮಾಡಿಕೊಳ್ಳುವುದಾಗಿ ಹಾಗೂ ತಿರುಪತಿ, ಧರ್ಮಸ್ಥಳಕ್ಕೆ ಕರೆದುಕೊಂಡು ಹೋಗಿರುವುದಾಗಿ ಮಾಹಿತಿ ನೀಡಿದ್ದಳು. ಹೇಳಿಕೆ ನೀಡಿದ್ದೇನೆ.

**ಪಾಟೀ ಸವಾಲುಃ ಆರೋಪಿ ಪರ ಶ್ರೀ. ವಿ.ಆರ್.ವಕೀಲರಿಂದ ಪಾಟೀ ಸವಾಲು**

3 ವರೆ ವರ್ಷದ ಹಿಂದೆ ಹೇಳಿಕೆ ನೀಡಿರುತ್ತೇನೆ. ಆಗ ಮೇಲೆ ಹೇಳಿದ್ದ ಎಲ್ಲಾ ವಿಚಾರ ತಿಳಿಸಿದ್ದೇನೆ. ನಾನು ಆರೋಪಿಯನ್ನು ಮುಂಚೆ ನೋಡಿಲ್ಲ ಎಂದರೆ ಸರಿಯಲ್ಲ. ಆತನ ವಿಚಾಸ ಹಾಗೂ ತಂದೆ ತಾಯಿಯ ಬಗ್ಗೆ ಗೊತ್ತಿಲ್ಲ. ನನ್ನ ತಂಗಿ ವಿದ್ಯಾವಂತೆ. ಎಲ್ಲ ವಿಚಾರ ತಂಗಿಯಿಂದ ನನಗೆ ತಿಳಿದಿದೆ ಎಂದರೆ ಸರಿ. ಚಾಸಾ-1 ರವರು ಹೇಳಿದಷ್ಟು ಮಾತ್ರ ಗೊತ್ತು. ನನ್ನ ತಂಗಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆಂದರೆ ಸರಿಯಲ್ಲ. ಆರೋಪಿ ಚಾಸಾ-1 ರವರನ್ನು ಚೇಳೂರು ಲಾಡ್ಜ್ ಹಾಗೂ ಬೆಂಗಳೂರಿನಲ್ಲಿ ಅತ್ಯಾಚಾರ ಮಾಡಿಲ್ಲ ಎಂದರೆ ಸರಿಯಲ್ಲ. ನನ್ನ ತಂಗಿ ಬುದ್ಧಿವಂತಳು. ಒಳಿತು ಕೆಡುಕುಗಳ ಅರಿವು ಇದೆ ಎಂದರೆ ನನಗೆ ಗೊತ್ತಿಲ್ಲ. ಆರೋಪಿಯನ್ನು ಮುಸಲ್ಮಾನ ಜಾತಿಗೆ ಮತಾಂತರ ಮಾಡಿಸಲು ಬಲವಂತ ಮಾಡಿದ್ದು , ಆತ ಒಪ್ಪದ ಕಾರಣ ಸುಳ್ಳು ಕೇಸು ದಾಖಲಿಸಿದ್ದೇವೆ ಎಂದರೆ

ಸರಿಯಲ್ಲ.

**<u>ಮರು ವಿಚಾರಣೆಃ ..... ಇಲ್ಲ .....</u>**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಸಾಕ್ಷಿಯ ಹೇಳಿಕೆಯನ್ನು ಬೆರಳಚ್ಚು ಮಾಡಲಾಯಿತು) ಓ.ಹೇ.ಕೇ. ಸರಿ ಇದೆ.

ಸಹಿ/-

ದಿಃ23.09.2025 **(ಕೆ.ಎಂ.ರಾಜಶೇಖರ)**

ಸ್ಥಳಃ ಚಿಂತಾಮಣಿ ಎರಡನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,

ಚಿಕ್ಕಬಳ್ಳಾಪುರ, ಕಾರ್ಯಸ್ಥಾನ ಚಿಂತಾಮಣಿ.